ಪ್ರ-72-107



# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಹರೀಶ್‌ಕುಮಾರ್ ಅವರು ರಾಜ್ಯದ ಗೃಹ ರಕ್ಷಕ ದಳ ಸ್ವಯಂ ಸೇವಾ ಸಿಬ್ಬಂದಿಗಳಿಗೆ ತೆಲಂಗಾಣ ರಾಜ್ಯದ ಮಾದರಿಯಲ್ಲಿ ಗೌರವಧನವನ್ನು ಕಲ್ಪಿಸಿ ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ನಿಯಮ 72 ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಗೃಹ ಸಚಿವರ ಉತ್ತರ :**

ರಾಜ್ಯ ಗೃಹರಕ್ಷಕ ದಳ ಸ್ವಯಂ ಸೇವಕರಿಗೆ ನಿರಂತರ 365 ದಿನಗಳ ಕರ್ತವ್ಯ ನೀಡಿ, ತೆಲಂಗಾಣ ರಾಜ್ಯದಲ್ಲಿ ಚಾಲ್ತಿಯಲ್ಲಿರುವಂತೆ ಏಕರೂಪದ ಗೌರವಧನ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ಕಲ್ಪಿಸಿ ಹಾಗೂ ಇಎಸ್‌ಐ ಮತ್ತು ಸರ್ಕಾರಿ ಯೋಜನೆಗಳಾದ ಆರೋಗ್ಯಭಾಗ್ಯ/ಕೌಟುಂಬಿಕ ಆರೋಗ್ಯ ವಿಮೆಗಳಂತಹ ಮೂಲಭೂತ ಸೌಲಭ್ಯ ಒದಗಿಸಿ ಸದರಿ ಸಮಸ್ಯೆಗಳ ನಿವಾರಣೆಗೆ ಕೈಗೊಳ್ಳುವ ಕ್ರಮಗಳಿಗೆ ಸಂಬಂಧಿಸಿದಂತೆ ಈ ಇಲಾಖೆಯಿಂದ ಈ ಕೆಳಗೆ ತಿಳಿಸಲಾದ ಕ್ರಮಗಳನ್ನು ಕೈಗೊಳ್ಳಲಾಗಿದೆ.

ರಾಜ್ಯದ ಗೃಹರಕ್ಷಕದಳದಲ್ಲಿ ಪ್ರಸ್ತುತ 25,988 ಗೃಹರಕ್ಷಕ ಸದಸ್ಯರು ನೊಂದಣಿಯಾಗಿರುತ್ತಾರೆ. ಎಲ್ಲಾ ಗೃಹರಕ್ಷಕರಿಗೆ ವಿವಿಧ ಇಲಾಖಾ ಕರ್ತವ್ಯಗಳಿಗೆ ನಿಯೋಜಿಸುವ ಉದ್ದೇಶದಿಂದ ಸರದಿ ಆಧಾರದ ಮೇರೆಗೆ ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿದೆ.

**Judgement of Supreme Court of India – Civil Appeal No.6373 of 2010 and Civil Appeal No. 2759 of 2015 (Arising out of SLP(C) No. 12858 of 2009 Judgement Order dated: 11-March 2015 reads as follows:**

> **" 22. In view of the discussion made above, no relief can be granted to the appellants either regularization of services or grant of regular appointments hence no interference is called for against the judgments passed by the Himachal Pradesh, Punjab and Delhi High Courts. However, taking into consideration the fact that Home Guards are used during the emergency and for other purposes and at the time of their duty they are empowered with the power of police personnel, we are of the view that the State Government should pay them the duty allowance at such rates, total of which 30 days (a month) comes to minimum of the pay to which the police personnel of State are entitled. It is expected that the State Government shall pass appropriate orders in terms of aforesaid observation on an early date preferably within three months".**

ಮೇಲ್ಕಂಡ ಸರ್ವೋಚ್ಛ ನ್ಯಾಯಾಲಯದ ಆದೇಶದನ್ವಯ ಸರ್ಕಾರದ ಪತ್ರ ಸಂಖ್ಯೆ.ಒಇ 16 ಕಗೃಸೇ 2019(ಭಾಗ-1) ದಿನಾಂಕ: 26-07-2019 ರಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶಕ್ಕೆ ಸಂಬಂಧಿಸಿದಂತೆ, ಅಡ್ವೋಕೇಟ್ ಜನರಲ್ ರವರು ನೀಡಿರುವ ಈ ಕೆಳಕಂಡ ಅಭಿಪ್ರಾಯ ನೀಡಿರುತ್ತಾರೆ.

" In the light of the observation of the Supreme Court in Civil Appeal No. 6373/2010 that the Home Guards are used during emergency and for other purposes and while so discharging they are empowered with the power of police personnel and therefore special allowance has to be ordered to be paid to them as indicated in the said judgement, the state can take the stand that it is only those home guards who are on deputation to the police department are to be paid the minimum wages payable to the police personnel".

ಕರ್ನಾಟಕ ಸರ್ಕಾರದ ನಡವಳಿಗಳ ಆದೇಶ ಸಂಖ್ಯೆ. ಒಇ 16 ಕಗೃಸೇ 2019, ದಿನಾಂಕ: 07ನೇ ಸೆಪ್ಟೆಂಬರ್ 2019 ರನ್ವಯ ಪೊಲೀಸ್ ಇಲಾಖೆಯಲ್ಲಿ ನಿಯೋಜಿತರಾದ ಪೊಲೀಸ್ ಪೇದೆಗಳಿಗೆ ಮೀಸಲಾದ ಕರ್ತವ್ಯ ನಿರ್ವಹಿಸುತ್ತಿರುವ ಗೃಹರಕ್ಷಕರಿಗೆ ಮಾತ್ರ 1-4-2020 ರಿಂದ ಜಾರಿಗೆ ಬರುವಂತೆ ಕರ್ತವ್ಯ /ದಿನ ಭತ್ಯೆಯನ್ನು ರೂ. 750/- ಕ್ಕೆ ಹೆಚ್ಚಿಸಲು ಸರ್ಕಾರವು ಮಂಜೂರಾತಿ ನೀಡಿದೆ. ಆದ್ದರಿಂದ, ತೆಲಂಗಾಣ ರಾಜ್ಯದ ಮಾದರಿಯಲ್ಲಿ ಗೌರವಧನವನ್ನು ಕಲ್ಪಿಸಲು ಅವಕಾಶವಿರುವುದಿಲ್ಲ.

ಗೃಹರಕ್ಷಕ ಸದಸ್ಯರು ಕರ್ತವ್ಯ ನಿರ್ವಹಿಸುವ ಸಮಯದಲ್ಲಿ ಅಪಘಾತ ಅಥವಾ ದುರ್ಮರಣ ಹೊಂದಿದಲ್ಲಿ, ಪರಿಹಾರ ಧನವಾಗಿ ಸರ್ಕಾರದ ಆದೇಶ ಪತ್ರ ಸಂಖ್ಯೆ: ಒಇ 144 ಕಗೃಸೇ/2012, ದಿನಾಂಕ: 31-05-2016 ರ ಪ್ರಕಾರ ದಿನಾಂಕ: 01-04-2016 ರಿಂದ ಅನ್ವಯವಾಗುವಂತೆ ಪರಿಹಾರ ಧನವನ್ನು ವಿತರಿಸಲಾಗುತ್ತಿದೆ.

ಗೃಹರಕ್ಷಕರು ಸ್ವಯಂಸೇವಕರಾಗಿದ್ದು, ಕರ್ತವ್ಯ/ಕವಾಯತು ವೇಳೆಯಲ್ಲಿ ಗಾಯಗೊಂಡಲ್ಲಿ ಅಥವಾ ಮೃತ ಹೊಂದಿದಂತಹ ಸಮಯದಲ್ಲಿ ಪರಿಹಾರ ಧನ ನೀಡಲಾಗುವುದು. ಉಳಿದಂತೆ, ಇತರೆ ಸಂದರ್ಭಗಳಲ್ಲಿ ಗೃಹರಕ್ಷಕರು ಗಾಯಗೊಂಡಲ್ಲಿ ಪರಿಹಾರ ಧನ ನೀಡುವ ಅವಕಾಶವಿರುವುದಿಲ್ಲ.

ಹಾಗೂ ಗೃಹರಕ್ಷಕರು ಖಾಯಂ ನೌಕರರಲ್ಲ. ಅಲ್ಲದೇ, ಇವರುಗಳು ಮಧ್ಯೆ ಮಧ್ಯೆ ಸೇವೆಯನ್ನು ಬಿಟ್ಟು ಹೋಗುವ ಸಂದರ್ಭಗಳು ಸಹ ಇರುತ್ತದೆ. ಸರ್ಕಾರದ ವಿವಿಧ ಇಲಾಖೆಯ ನೌಕರರಿಗಳಿಗೂ ಸಹ ಇಂತಹ ಸೌಲಭ್ಯ ಲಭ್ಯವಿರುವುದಿಲ್ಲ. ಹೀಗಾಗಿ ಸಮೂಹ ಅಪಘಾತ ವಿಮೆ ಯೋಜನೆ **(Group Personal Accident Policy)** ಅನ್ನು ಗೃಹರಕ್ಷಕರುಗಳಿಗೆ ವಿಸ್ತರಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲ .

ಪ್ರತಿ ಗೃಹರಕ್ಷಕ ಸದಸ್ಯರಿಂದ ವಾರ್ಷಿಕವಾಗಿ ರೂ. 50/- ಗಳನ್ನು ಗೃಹರಕ್ಷಕ ನಿಧಿಗೆ ವಂತಿಗೆಯಾಗಿ ಪಡೆಯಲಾಗುತ್ತಿದೆ. ಈ ಗೃಹಕರಕ್ಷಕ ನಿಧಿಯಿಂದ ವಿದ್ಯಾಭ್ಯಾಸಕ್ಕಾಗಿ ಮತ್ತು ವೈದ್ಯಕೀಯ ಹಾಗೂ ಮರಣ ಹೊಂದಿದಲ್ಲಿ ಪರಿಹಾರ ಧನವನ್ನು ಗೃಹರಕ್ಷಕರಿಗೆ ಹಾಗೂ ಕುಟುಂಬ ವರ್ಗದವರಿಗೆ ಸಹಾಯ ಧನವನ್ನು ಕೋರಿದಲ್ಲಿ, ಮಂಜೂರು ಮಾಡಲಾಗುತ್ತಿದೆ.

<u>ಸಂಖ್ಯೆ: ಒಇ 01 ಉಕಾ(ಬೆ) 2021</u>

15/12/2021

{ಆರಗ ಜ್ಞಾನೇಂದ್ರ}

ಮಾನ್ಯ ಗೃಹ ಸಚಿವರು